# ಕರ್ನಾಟಕ ವಿಧಾನ ಪರಿಷತ್ತು

## ಶ್ರೀ ತಿಪ್ಪಣ್ಣಪ್ಪ ಎಸ್, ಕಮಕನೂರ ವಿಧಾನ ಪರಿಷತ್ತಿನ ಸದಸ್ಯರು ನಿಯಮ-330 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ:** **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 2022-23 ನೇ ಸಾಲಿನಲ್ಲಿ ಕಲುಬುರ್ಗಿ ನಗರದಲ್ಲಿ ಬಡವರಿಗಾಗಿ ಮಂಜೂರಾದ ಮನೆಗಳು, ನಿರ್ಮಾಣ ಹಂತದಲ್ಲಿರುವ ಮನೆಗಳು, ಒದಗಿಸಲಾದ ಅನುದಾನ, ಬಿಡುಗಡೆಯಾದ ಅನುದಾನ, ಖರ್ಚು ಮಾಡಲಾದ ಅನುದಾನ, ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಉಳಿದಿರುವ ಅನುದಾನ ಹಾಗೂ ಕಾಮಗಾರಿಗಳ ಕಾಲಮಿತಿಯ ಬಗ್ಗೆ ನಿಯಮ-330ರ ಅಡಿಯಲ್ಲಿ ಮಾನ್ಯ ವಸತಿ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.**

**ಉತ್ತರ:** ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 2022-23ನೇ ಸಾಲಿನಲ್ಲಿ ಕಲುಬುರ್ಗಿ ನಗರದ ಬಡಜನರಿಗೆ ಯಾವುದೇ ಮನೆಗಳು ಮಂಜೂರಾಗಿರುವುದಿಲ್ಲ.

ಮುಂದುವರೆದಂತೆ, ಕಲುಬುರ್ಗಿ ನಗರದ ಕೊಳಗೇರಿ ನಿವಾಸಿಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 2017-18 ರಿಂದ 2018-19ನೇ ಸಾಲಿನವರೆಗೆ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯೊಂದಿಗೆ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಡಾ|| ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಮನ್ವಯಗೊಳಿಸಿ ಒಟ್ಟು 3,429 ಮನೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತಿದ್ದು, ಈ ಪೈಕಿ 500 ಮನೆಗಳು ಪೂರ್ಣಗೊಂಡಿರುತ್ತದೆ. 2,929 ಮನೆಗಳಿಗೆ ದಿನಾಂಕ:21.10.2021 ರಂದು ಕಾರ್ಯಾದೇಶ ನೀಡಲಾಗಿದ್ದು, ಪ್ರಸ್ತುತ ಸದರಿ ಮನೆಗಳ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಸದರಿ ಯೋಜನೆಗಳಿಗೆ ಮಂಜೂರಾದ, ಬಿಡುಗಡೆಯಾದ ಮತ್ತು ಖರ್ಚು ಮಾಡಲಾದ ಅನುದಾನಗಳ ವಿವರಗಳು ಈ ಕೆಳಕಂಡಂತಿದೆ.

**ರೂ.ಲಕ್ಷಗಳಲ್ಲಿ**

| ಹಂತ | ಮಂಜೂರಾದ ಮನೆಗಳ ಸಂಖ್ಯೆ | ಮಂಜೂರಾದ ಅನುದಾನ | | | | ಫಲಾನುಭವಿ ವಂತಿಕ | | ಬಿಡುಗಡೆಯಾದ ಅನುದಾನ | | | ಖರ್ಚು ಮಾಡಲಾದ ಅನುದಾನ |
|---|---|---|---|---|---|---|---|---|---|---|---|
| | | ಯೋಜನಾ ಮೊತ್ತ | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಮೂಲಭೂತ ಸೌಲಭ್ಯ | ಫಲಾನುಭವಿ ವಂತಿಕೆ(10 % & 15%) | ಬ್ಯಾಂಕ್ ಸಾಲ | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಫಲಾನುಭವಿ ವಂತಿಕೆ/ಇತರೆ ಮೂಲ | |
| ಹಂತ-1 | 500 | 2735.00 | 750.00 | 1000.00 | 245.00 | 249.00 | 491.00 | 750.00 | 1000.00 | 778.69 | 2528.69 |
| ಹಂತ-2 | 1447 | 9248.78 | 2171.00 | 2695.00 | 618.52 | 937.00 | 2828.00 | 319.64 | 428.91 | 0 | 748.55 |
| | 1482 | 9472.48 | 2223.00 | 2170.00 | 633.48 | 1180.00 | 3266.00 | 110.62 | 439.25 | 0 | 545.99 |
| ಒಟ್ಟು | 3429 | 21456.26 | 5144 | 5865 | 1497 | 2366 | 6585 | 1180.26 | 1868.16 | 778.69 | 3823.23 |

ಸದರಿ ಯೋಜನೆಯಡಿ ಮನೆಯ ಪ್ರತಿ ಘಟಕ ವೆಚ್ಚ ಸರಾಸರಿ ರೂ.5.50 ಲಕ್ಷಗಳಿಂದ ರೂ.6.50 ಲಕ್ಷಗಳಿದ್ದು, ಕೇಂದ್ರ ಸರ್ಕಾರದಿಂದ 1.50 ಲಕ್ಷಗಳು (ಸಾಮಾನ್ಯ ಮತ್ತು ಪ.ಜಾತಿ / ಪ. ಪಂಗಡ ವರ್ಗಕ್ಕೆ) ಹಾಗೂ ರಾಜ್ಯ ಸರ್ಕಾರದಿಂದ ಸಾಮಾನ್ಯ ವರ್ಗಕ್ಕೆ ರೂ. 1.20 ಲಕ್ಷಗಳು, ಪ.ಜಾತಿ / ಪ.ಪಂಗಡ ವರ್ಗದವರಿಗೆ ರೂ. 2.00 ಲಕ್ಷಗಳ ಅನುದಾನ ಒದಗಿಸಲಾಗುತ್ತಿದೆ.

ಫಲಾನುಭವಿಗಳು ಪ್ರಾರಂಭಿಕ ವಂತಿಕೆಯನ್ನು (ಪರಿಶಿಷ್ಟ ಜಾತಿ / ಪಂಗಡ ಘಟಕ ವೆಚ್ಚದ ಶೇ.10% ರಷ್ಟು ಇತರೆ ವರ್ಗದ ಫಲಾನುಭವಿಗಳಿಗೆ ಶೇ. 15 ರಷ್ಟು) ಭರಿಸಿ, ಬಾಕಿ "ಫಲಾನುಭವಿಗಳ ವಂತಿಕೆ" ಮೊತ್ತವನ್ನು ಫಲಾನುಭವಿಗಳ ಹೆಸರಿನಲ್ಲಿ ಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ಒದಗಿಸಲು ಕ್ರಮ ವಹಿಸಲಾಗುತ್ತಿದೆ. ಸದರಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಹಂತ ಹಂತವಾಗಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಯೋಜನೆಯ ಮಾರ್ಗಸೂಚಿಯನ್ವಯ 2024ರ ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

[ಸಂಖ್ಯೆ: ವಇ 93 ಹೆಚ್‌ಎಫ್‌ಎ 2023]

(ಬಿ.ಜೆಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು